ಮನಸಿಲ್ಲದೆ ಒಂದು ನಿಮಿಷ ಕಾದರು. ವಾಗ್ವಾದ ತಾರಕಕ್ಕೇರುತ್ತ ಹೋಯಿತು. ಎದ್ದು ಲಿಫ್ಟಿನತ್ತ ಧಾವಿಸಿದರು. ಸೆಕ್ಯುರಿಟಿಗು ಒಂದನೆ ಮಹಡಿ ಗಂಗಾಧರನಿಗು ಜಗಳ ಹತ್ತಿ ಏಕವಚನದಲ್ಲಿ ಭರ್ತ್ಸನೆಯ ಹಂತಕ್ಕೆ ಹೋಗಿತ್ತು. ಗಂಗಾಧರ ಅವನ ಹೆಂಡತಿ ಇಬ್ಬರೂ ಎಂಜಿನಿಯರು. ಒಮ್ಮೆ ರಾತ್ರಿ ಒಂಬತ್ತುಗಂಟೆ ಹೊತ್ತಿಗೆ ಯಾವುದೊ ರಶೀದಿ ಕೊಡಲು ಸೆಕ್ಯುರಿಟಿ ಹೋಗಿ ಬೆಲ್ ಮಾಡಿದ್ದ. ಹೊತ್ತುಗೊತ್ತಿಲ್ಲದೆ ಹೆಂಗಸರೊಬ್ಬರೆ ಇದ್ದದ್ದೂ ನೋಡದೆ ಬೆಲ್ ಮಾಡಿ ತೊಂದರೆ ಕೊಡತೀಯ ಅಂತ ಬೈದು ಪೊಲೀಸ್ ಕಂಪ್ಲೇಂಟು ಕೊಡತೀನಿ ಅಂತೆಲ್ಲ ದಬಾಯಿಸಿದ್ದರು. ಗಲಾಟೆಯಾಗಿ ಇನ್ನು ಯಾರ ಮನೆಗೂ ಸೆಕ್ಯುರಿಟಿ ಪತ್ರ ಮುಂತಾದ್ದು ಕೊಡಲು ಸ್ವತಃ ಹೋಗಬಾರದು ಅಂತ ಆದೇಶವಾಗಿತ್ತು. ಪತ್ರ ಮುಂತಾದ್ದು ಏನೇ ಇದ್ದರೂ ಸೆಕ್ಯುರಿಟಿಯ ಹತ್ತಿರವಿರುತ್ತದೆ. ಫ್ಲ್ಯಾಟಿನವರು ತಮ್ಮದನ್ನು ನೋಡಿ ತೆಗೆದುಕೊಳ್ಳಬೇಕು ಅಂತ ಆಗಿತ್ತು. ಗಂಗಾಧರನ ಹೆಂಡತಿಗೆ ತವರ ಕಡೆಯಿಂದ ಯಾವುದೊ ಪಾರ್ಸಲು ಬಂದಿತ್ತು. ಅವನೆದುರೇ ಅಷ್ಟು ಸಲ ಹಾದುಹೋದರೂ ತಮಗೆ ಹೇಳಿಲ್ಲ ಅಂತ ಗಂಡಹೆಂಡತಿ ಕೈ ಹಚ್ಚಿದ್ದರು. ಎಲ್ಲ ಎದುರೆ ಇದೆ, ಹೋಗಿಬರುವಾಗ ನೋಡಿ ತಗೋಬೇಕು. ತನಗೆ ಬೇರೆ ಕೆಲಸವೂ ಇದೆ, ಒಬ್ಬೊಬ್ಬರ ಹೆಸರೂ ನೆನಪಿಟ್ಟುಕೊಂಡು ಹೇಳೋದು ಕಷ್ಟ ಅಂತ ಅವನ ವಾದ. ಅವನ ಸಂಬಳ ಕೊಡೋದು ತಾವು. ಮಹತ್ವ ಕೊಡದೆ ಅಲಕ್ಷ್ಯ ಮಾಡುತ್ತಾನೆ ಅಂತ ಇವರ ಆಪಾದನೆ. ಗಂಗಾಧರನ ಸ್ವಭಾವದಲ್ಲೆ ತರಲೆ ಮತ್ತು ಪೂರ್ವಗ್ರಹ ತುಂಬಿಕೊಡಿದೆ. ಏನು ಮಾಡಿದರು ಕಷ್ಟ ಅನಿಸಿ ಹೇಗೋ ಬಗೆ ಹರಿಸಿದ್ದಾಯಿತು. ಮೇಲೆ ಹತ್ತುತ್ತಿದ್ದವರಿಗೆ ಏನನಿಸಿತೋ, ಹೋಗಿ ಕನಕಾದೇವಿಯ ಮನೆ ಬೆಲ್ ಒತ್ತಿದರು. ಆಮೇಲೆ ಏನಂದುಕೋತಾರೋ ಅನ್ನುವ ಕಸಿವಿಸಿ ಶುರುವಾಯಿತು. ಬಾಗಿಲು ತೆರೆದ ಕನಕಾದೇವಿ ಇವರನ್ನು ಕಂಡು, 'ಏನೋ ಗಲಾಟೆ ಕೇಳಿಸ್ತು. ಸೀರಿಯಲ್ ನೋಡತಿದ್ದೆ, ಬ್ರೇಕ್‌ನಲ್ಲಿ ನೋಡೋಣ ಅಂತ ಕೆಳಗೆ ಬಂದೆ. ನೀವು ಒಂದು ಹಂತಕ್ಕೆ ತಂದದ್ದು ಕಂಡು ವಾಪಸು ಬಂದೆ. ಆ ಗಂಡಹೆಂಡತೀದು ಬರೀ ಗೋಳು ಬಿಡ್ರಿ...' ಅಂದರು. ಇಂತದ್ದೆ ಕೆಲಸ ಅಂತ ನಿರ್ಧರಿಸಿಕೊಳ್ಳದೆ ಬಂದ ಶಿವರಾಂ, 'ನೀವು ಸೆಕ್ರೆಟರಿ, ಪವರ್‌ಫುಲ್. ವಾಟ್ಸ್‌ಆ್ಯಪಲ್ಲಿ ವಾರ್ನಿಂಗ್ ಕೊಟ್ಟು ಒಂದು ಖಡಕ್ ಸಂದೇಶ ಕೊಡಿ ಆಯ್ತಾ? ಅದನ್ನೆ ಹೇಳಕ್ಕೆ ಬಂದೆ. ಸರಿ ಹಾಗಿದ್ರೆ ಆಯ್ತಾ?...' ಅಂತ ಮೆಟ್ಟಲತ್ತ ತಿರುಗಿದರು.

ಬೆಳಿಗ್ಗೆ ಮಾಮೂಲು ಜಾಗೆ ಸೇರಿದ ಶಿವರಾಂ ಚೆಕ್ ಮಾಡಲು ಬಂದಿದೀನಿ ಅಂತ ಕನಕಾದೇವಿಗೆ ಮೆಸೇಜು ಕಳಿಸಿದರು. ಅವರು ಬರುತ್ತಿದ್ದಂತೆ ಶುರುಮಾಡಿದರು. ಒಂದೊಂದಾಗಿ ಚಿತ್ರಗಳು ಮೂಡತೊಡಗಿದವು. ಬುಟ್ಟಿ ಸುರುಗುವವರು, ನೆಲದಮೇಲೆ ಹೂವಿನ ಚೀಲ ಇಟ್ಟವರು, ಬೆಕ್ಕು, ಇಲಿ ಎಲ್ಲ ಮೂಡಿದವು. ಮಾಮೂಲಿ ಸಮಯಕ್ಕೆ ಪ್ರಮೋದ್ ಬಂದ; ಹಿಂದೆಯೆ ಅವಳು. ಅಂದರಿದು ಇವರ ನಿತ್ಯದ ಪ್ರೋಗ್ರಾಮಾ? ಎಷ್ಟೋ ದಿನದಿಂದ ನಡೀತಿರಬಹುದು? ಆತ ಅವಳ ಕೆನ್ನೆ ತಟ್ಟಿದ. 'ಏ ಮಾರುತ, ನಿನಗೆ ತೊಟ್ಟಿಲಲ್ಲಿ ಇಟ್ಟ ಹೆಸರು ಮಲೆಯ ಮಾರುತಾ ಅಲ್ವೇನೆ?'

'ಮಲೆಯ ಅಲ್ಲ, ಮಲಯ. ಯಾಕೀಗ... ಬದಲಾಯ್ಸೋ ಆಲೋಚ್ನೆ ಇದೆಯಾ?'

'ಇಲ್ವೇ. ನೋಡು, 'ಮ' ಅಕ್ಷರದ ಕಾಗುಣಿತಕ್ಕೆಲ್ಲ ಎಷ್ಟು ಅರ್ಥಬದ್ಧವಾಗಿ ಹೊಂದೋ ಹೆಸರು ಅದು. ಅಪರೂಪ ಗೊತ್ತಾ!...'

'ಅಂದ್ರೆ?'

'ನೋಡು, ಮಲೆಯ ಮಾರುತಾ, ಮಾಲೆಯ ಮಾರುತಾ, ಮೂಲೆಯ ಮಾರುತಾ,